**ದಿನಾಂಕಃ 01/04/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಜೆ.ಡಿ.ಆರ್ ರವರ ಪರ ಶ್ರೀ ಸಿ.ಕೆ.ಎಂ ವಕೀಲರಿಂದಃ**

1. ಅರ್ಜಿದಾರರು ನನ್ನ ಅಣ್ಣನಾಗಬೇಕು. ಈ ಪ್ರಕರಣವು ಸರ್ವೆ ನಂಬರ್ 39/5 ಮತ್ತು 39/6 ಕ್ಕೆ ಸಂಬಂಧಿಸಿದಂತೆ ನಡೆಯುತ್ತಿದೆ. ಸರ್ವೆ ನಂಬರ್ 39 ರಲ್ಲಿ ಎಷ್ಟು ಪೋಡುಗಳಿವೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 39/1 ರಲ್ಲಿ ಎಷ್ಟು ಎಕರೆ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ.

2. ಸರ್ವೆ ನಂಬರ್ 39 ರಲ್ಲಿರುವ ಎಲ್ಲಾ ಪೋಡುಗಳ ವಿಸ್ತೀರ್ಣ ಮತ್ತು ಚಕ್ಕುಬಂದಿ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 39 ರಲ್ಲಿ ನನಗೆ ಜಮೀನು ಇತ್ತು .ಆದರೆ ಯಾವ ಪೋಡು ಎಂದು ಈಗ ನೆನಪಿಲ್ಲ. ಅದನ್ನು 10 ವರ್ಷಗಳ ಹಿಂದೆ ಮಾರಾಟ ಮಾಡಿದ್ದೇನೆ. ಅದರ ವಿಸ್ತೀರ್ಣ ನನಗೆ ನೆನಪಿಲ್ಲ. ನಾನು ಮಾರಾಟ ಮಾಡಿದ ವ್ಯಕ್ತಿಯ ಹೆಸರು ನಾಗೇಗೌಡ. ಮಾರಾಟ ಮಾಡಿದ ಜಮೀನಿನ ಮುಖಾಂತರ ನನ್ನ ಜಮೀನಾದ ಸರ್ವೆ ನಂಬರ್ 55 ಕ್ಕೆ ಹೋಗಬೇಕು.

3. ಸರ್ವೆ ನಂಬರ್ 39 ರ ಅಕ್ಕಪಕ್ಕದಲ್ಲಿ ಕಮಲಮ್ಮ, ಸ್ವಾಮಿಗೌಡ ಹಾಗೂ ರವಿ ರವರ ಜಮೀನು ಇದೆ. ಅವರು ತಮ್ಮ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಅವರ ಜಮೀನಿನ ಸರ್ವೆ ನಂಬರ್, ವಿಸ್ತೀರ್ಣ ಮತ್ತು ಚಕ್ಕುಬಂದಿ ನನಗೆ ಗೊತ್ತಿಲ್ಲ.

4. ನನ್ನ ಮುಖ್ಯ ಪ್ರಮಾಣಪತ್ರದಲ್ಲಿರುವ ಮಾಹಿತಿಯನ್ನು ನಾನೇ ಹೇಳಿ ಬರೆಸಿರುತ್ತೇನೆ. ಅರ್ಜಿ ಸ್ವತ್ತಿನಲ್ಲಿ ಕಮಲಮ್ಮ, ಸ್ವಾಮಿಗೌಡ ಹಾಗೂ ರವಿಯವರು ಗಲಾಟೆ ಮಾಡುವುದನ್ನು ನಾನು ನೋಡಿದ್ದೇನೆ. ಗಲಾಟೆಯಾದ ದಿನಾಂಕ, ತಿಂಗಳು ಮತ್ತು ಇಸವಿ ನನಗೆ ಗೊತ್ತಿಲ್ಲ. ಸದರಿ ಗಲಾಟೆ ನಡೆದದ್ದು ಸುಮಾರು 4 ವರ್ಷಗಳ ಹಿಂದೆ. ಅಕ್ಕಪಕ್ಕದ ಜಮೀನಿನವರು ಗಲಾಟೆಯಾಗಿದ್ದು ನೋಡಿಲ್ಲ. ಗಲಾಟೆಯು ಯಾವ ಚಕ್ಕುಬಂದಿಯೊಳಗೆ ಆಗಿದೆ ನನಗೆ ಗೊತ್ತಿಲ್ಲ. ಸಾಕ್ಷಿಯು ಸ್ವತಃ ಸರ್ವೆ ನಂಬರ್ 39/5

ಮತ್ತು 39/6 ರಲ್ಲಿ ಗಲಾಟೆಯಾಗಿತ್ತು ಎಂದು ನುಡಿಯುತ್ತಾರೆ. ಸರ್ವೆ ನಂಬರ್ 39/5 ಮತ್ತು 39/6 ರ ಚಕ್ಕುಬಂದಿ ನನಗೆ ಗೊತ್ತಿಲ್ಲ.

5. ಮೂಲ ದಾವೆಯ ತೀರ್ಪು ಮತ್ತು ಡಿಕ್ರಿಯ ಮಾಹಿತಿಯನ್ನು ನಿಮ್ಮ ಅಣ್ಣ ಕೊಟ್ಟರಾ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ಉತ್ತರಿಸುತ್ತಾರೆ. ನನಗೆ ತೀರ್ಪು ಮತ್ತು ಡಿಕ್ರಿಯ ಬಗ್ಗೆ ನನ್ನ ಅಣ್ಣ (ಡಿ.ಹೆಚ್.ಆರ್)ನನ್ನು ಬಿಟ್ಟು ಬೇರೆ ಯಾರೂ ಮಾಹಿತಿಯನ್ನು ನೀಡಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರ ಅಂಶಗಳನ್ನು ನಾನೇ ಹೇಳಿ ಬರೆಸಿದ್ದೇನೆ. ನನ್ನ ಅಣ್ಣ ಆ ಬಗ್ಗೆ ನನಗೆ ಮಾಹಿತಿ ನೀಡಿಲ್ಲ. ಗಲಾಟೆ ಸಮಯದಲ್ಲಿ ಅವಾಚ್ಯ ಶಬ್ದಗಳಾದ ಹೆಂಡತಿ, ಅವ್ವ, ಆಳು ಮೂಳು ಎಂದು ಬೈದಿರುತ್ತಾರೆ. ಗಲಾಟೆಯನ್ನು ನಾನೇ ಬಿಡಿಸಿರುತ್ತೇನೆ. ಅಕ್ಕಪಕ್ಕದ ಜಮೀನಿನಲ್ಲಿ ಸುಮಾರು 4-5 ಜನ ನಿಂತು ಗಲಾಟೆಯನ್ನು ನೋಡುತ್ತಿದ್ದರು. ನನ್ನ ಅಣ್ಣ ಜೆ.ಡಿ.ಆರ್. ರವರುಗಳಿಗೆ ಆ ಸಂದರ್ಭದಲ್ಲಿ ಏನನ್ನೂ ಮಾತನಾಡಿಲ್ಲ. ನಾನು ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿಲ್ಲ, ಆದರೆ ನನ್ನ ಅಣ್ಣ-ಡಿ.ಹೆಚ್.ಆರ್ ಕೊಟ್ಟಿರುತ್ತಾರೆ. ದೂರನ್ನು ಕೊಟ್ಟ ತಾರೀಖು, ತಿಂಗಳು, ಇಸವಿ ಗೊತ್ತಿಲ್ಲ. ಪೊಲೀಸರು ನನ್ನ ಹೇಳಿಕೆ ಪಡೆದುಕೊಂಡಿಲ್ಲ. 4 ವರ್ಷಗಳ ಹಿಂದೆ ಅರ್ಜಿ ಸ್ವತ್ತಿನಲ್ಲಿ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ಗಲಾಟೆಯನ್ನು ಬಿಡಿಸಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣನ ಮಾತು ಕೇಳಿ ಜೆಡಿಆರ್ ರವರುಗಳಿಗೆ ತೊಂದರೆ ಮಾಡಬೇಕೆಂಬ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜೆಡಿಆರ್ ರವರುಗಳು ಅರ್ಜಿಯ ಸ್ವತ್ತಿಗೆ ಎಂದೂ ಪ್ರವೇಶಿಸಿಲ್ಲ ಎಂದರೆ ಸರಿಯಲ್ಲ.

6. ಸಾಕ್ಷಿಗೆ ಒಂದು ಫೋಟೋದ ಜೆರಾಕ್ಸ್ ಪ್ರತಿಯನ್ನು ತೋರಿಸಿ ಅದರಲ್ಲಿರುವುದು 1 ನೇ ಜೆಡಿಆರ್ ಕಮಲಮ್ಮ ನವರ ಭಾವಚಿತ್ರ ಎಂದು ಕೇಳಲಾಗಿ ಸಾಕ್ಷಿಯು ಸರಿಯಾಗಿ ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ಕಮಲಮ್ಮನವರನ್ನು ನೋಡಿ ಇವತ್ತಿಗೆ ಎಷ್ಟು ವರ್ಷ ಆಯಿತು ಎಂಬ ಪ್ರಶ್ನೆಗೆ ಸಾಕ್ಷಿಯು ದಿನಾ ನೋಡುತ್ತಿರುತ್ತೇನೆ ಎಂದು ನುಡಿಯುತ್ತಾರೆ. ಕಮಲಮ್ಮ ಆರೋಗ್ಯವಾಗಿ, ಓಡಾಡಿಕೊಂಡು ಇದ್ದಾರೆ. ಕಮಲಮ್ಮ

ನವರಿಗೆ ಪಾರ್ಶ್ವವಾಯು ಆಗಿ 7 ವರ್ಷಗಳಿಂದ ಅವರು ಓಡಾಡುವ ಸ್ಥಿತಿಯಲ್ಲಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣನಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**